

ಕರಗುತ್ತಿರುವ ಕಾಲವನ್ನು ಸಂಕೇತಿಸುವ ಡಾಲಿಯ ವಿಶ್ವಪ್ರಸಿದ್ಧ ಕಲಾಕೃತಿ

ಚಳುವಳಿಗಳಲ್ಲಿ ಅತಿವಾಸ್ತವಿಕತೆಯೂ ಒಂದು. ಈ ಚಳುವಳಿ ಸುಮಾರು 70–80 ವರ್ಷ ಕಾಲ ನಡೆದು ಈಗ ಅದರ ಶಕ್ತಿ ಕುಂದಿದೆ... ಒಂದು ದೃಷ್ಟಿಯಿಂದ ಈ ಚಳುವಳಿಯು ಕಾವ್ಯದ ಶೈಲಿಗೆ ಸಂಬಂಧಪಟ್ಟ ಕ್ರಾಂತಿಯೆನ್ನಬಹುದು; ಮತ್ತೊಂದು ದೃಷ್ಟಿಯಿಂದ ಇದು ಇಂದ್ರಿಯಗಳ ದಾಸ್ಯದಲ್ಲಿದ್ದ ಮಾನವನ ಬಿಡುಗಡೆಯೆನ್ನಬಹುದು; ಇದರ ವಿಷಯದಲ್ಲಿ ಸಹಾನುಭೂತಿಯಿಲ್ಲದವರು, ‘ಇದೊಂದು ಹೊಸ ಬಗೆಯ ರೋಗ’ ಎನ್ನಬಹುದು.

ಸಾಧಾರಣವಾಗಿ ನಾವು ಇತ್ತೀಚಿನ ಸಾಹಿತ್ಯ ಚಳುವಳಿಗಳೆಲ್ಲಾ ವಾಸ್ತವತೆಯ ಆಧಾರದ ಮೇಲೆ ನಿಂತಿವೆಯೆಂಬ ಭಾವನೆಯನ್ನಿಟ್ಟುಕೊಂಡಿದ್ದೇವೆ. ಅಂತೆಯೇ ಸರ್ರಿಯಲಿಸ್ಟ್ ಕಾವ್ಯದಲ್ಲಿ ನಮಗೆ ಅರ್ಥವಾಗದ ಚಿತ್ರಣಗಳ ಗುಂಪನ್ನು ನೋಡಿದಾಗ, ‘ಇದು ವಾಸ್ತವಿಕ ಸಾಹಿತ್ಯ; ಈ ಕವಿಗಳು ಜೀವನದಲ್ಲಿ ಕಾಣುವ ಅವ್ಯವಸ್ಥೆಯನ್ನು ಚಿತ್ರಿಸಹೊರಟಿದ್ದಾರೆ’ ಎಂದುಕೊಂಡರೆ ಅದು ತಪ್ಪು ಭಾವನೆಯಾಗುತ್ತದೆ. ನಾವು ಇಂದ್ರಿಯಗಳಿಂದ ಯಾವ ವಾಸ್ತವ ಪ್ರಪಂಚದ ಅನುಭವವನ್ನು ಪಡೆಯುತ್ತೇವೋ ಅದನ್ನು ಭೇದಿಸಿಕೊಂಡು ಮನಸ್ಸಿನ ಅಂತರಾಳದಲ್ಲಿರುವ ಸುಪ್ತ, ಅರ್ಧ ಸುಪ್ತ ಜೀವನವನ್ನು ಕರಗತಮಾಡಿಕೊಳ್ಳಲು ಯತ್ನಿಸುತ್ತದೆ ಈ ಸರ್ರಿಯಲಿಸಂ.

“1941ರಲ್ಲಿ ಬ್ರೆಟನ್ ಎಂಬವನು ಸರ್ರಿಯಲಿಸ್ಟರ ಗುಣಗಳನ್ನು ಹೀಗೆ ವರ್ಣಿಸಿದ: ಇಂದ್ರಿಯ ವ್ಯಾಪಾರವನ್ನೆಲ್ಲಾ ಕಳೆದುಕೊಳ್ಳುವುದು ಅಥವಾ ದೂರಮಾಡಿಕೊಳ್ಳುವುದು; ಅನಿರೀಕ್ಷಿತವಾದದ್ದರ ಅನ್ವೇಷಣೆಯಲ್ಲಿ ತೊಡಗುವುದು; ಅನಂತರ ಅಜ್ಞಾತ ಪ್ರಪಂಚದ ಪಾತಾಳಕ್ಕೆ ಧುಮುಕಿ ಅಲ್ಲಿರುವ ಅಜ್ಞಾತ ತತ್ತ್ವವನ್ನು ಕಂಡುಹಿಡಿಯುವುದು. ಈ ಅಜ್ಞಾತ ತತ್ತ್ವವನ್ನು ಹುಡುಕುವ ಹುಚ್ಚಾದರೂ ಏಕೆ, ಎನ್ನಬಹುದು. ರೊಮ್ಯಾಂಟಿಕ್ ಕವಿಗಳು ದಿನವೂ ನಾವು ಕಾಣುವ ವಾಸ್ತವ ಪ್ರಪಂಚದ ಸಂಕಲೆಗಳನ್ನು ಒಡೆದು ಬೇರೊಂದು ಪ್ರಪಂಚಕ್ಕೆ ಹಾರಿಹೋಗುತ್ತಾರೆಂದು ಹೇಳುವುದುಂಟಷ್ಟೆ. ಸರ್ರಿಯಲಿಸ್ಟ್ ಕವಿಗಳಿಗೆ ಮಾನವಪ್ರಪಂಚವೆಲ್ಲಾ, ಮಾನವನ ಮಾನಸಿಕ ಮತ್ತು ಬಾಹ್ಯ ಅನುಭವಗಳೆಲ್ಲಾ, ಸೆರೆಮನೆಯಂತೆ ತೋರುತ್ತದೆ. ಸತ್ಯವಿರುವುದು ಈ ಸೆರೆಮನೆಯ ಗೋಡೆಗಳಿಂದಾಚೆ. ಆದರೆ ಈ ಕಾರಾಗಾರದ ಗೋಡೆಗಳನ್ನು ಒಡೆಯುವುದು ಸಾಧ್ಯವಲ್ಲ. ವ್ಯವಸ್ಥಿತ ಪ್ರಪಂಚವೆಂಬ ಸೆರೆಮನೆಯಿಂದ ತಪ್ಪಿಸಿಕೊಂಡು ಹೋಗಲಾಗುವುದಿಲ್ಲ; ಅದನ್ನು ಸತ್ಯವೆಂದು ಒಪ್ಪಿಕೊಂಡು ಅಲ್ಲಿ ಜೀವಿಸಲೂ ಆಗುವುದಿಲ್ಲ...



ಸರ್ರಿಯಲಿಸಂ ಪರಿಕಲ್ಪನೆಯನ್ನು ಕನ್ನಡದಲ್ಲಿ ವಿವರಿಸಿದ ಮೊದಲಿಗರಲ್ಲೊಬ್ಬರಾದ ಡಿ.ವಿ. ಗುಂಡಪ್ಪ

“ಸರ್ರಿಯಲಿಸ್ಟ್ ಅನ್ವೇಷಕರ ವಾದವನ್ನು ಈ ರೀತಿ ಸಂಗ್ರಹಿಸಬಹುದು: ನಾವು ಮನಸ್ಸನ್ನು ತರ್ಕಬದ್ಧವಾದ ವಿಚಾರದಿಂದ ಬಿಡಿಸಿಕೊಳ್ಳಬೇಕು. ಏಕೆಂದರೆ ಆ ಬಗೆಯ ವಿಚಾರ ದಿವ್ಯವಾದ ಅವ್ಯವಸ್ಥೆ (ಡಿವೈನ್ ಡಿಸಾರ್ಡರ್)ಯನ್ನು ಗ್ರಹಿಸಲಾರದು. ವಿಚಾರಶಕ್ತಿಯು ನಮ್ಮ ಮನಸ್ಸಿಗೆ ಶತ್ರುವಾಗಿ ಪರಿಣಮಿಸಿದೆ. ಆದ್ದರಿಂದ ಅದಕ್ಕೆ ನಿಲುಕಲಾರದ ಮನಸ್ಸಿನ ಅಂತರಾಳದಲ್ಲಿ ನಮ್ಮ ಅನ್ವೇಷಣೆಯನ್ನು ನಡೆಸಬೇಕು. ಈ ದಾರಿಯಲ್ಲಿ ಹಿಂದೆ ನಡೆದಿರುವ ಅನ್ವೇಷಣೆಯ ಫಲವನ್ನೂ ಉಪಯಯೋಗಿಸಿಕೊಳ್ಳಬೇಕು. ದೆವ್ವಗಳು,